# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1262/2022

| | | |
|---|---|---|
| ಸಾಕ್ಷಿಯ ಹೆಸರು | ಃ ಆದರ್ಶ್ | ಸಿ.ಡಬ್ಲ್ಯೂ ಃ 03 |
| ತಂದೆ ಹೆಸರು | ಃ ಶ್ರೀಧರ್ | ಪಿ.ಡಬ್ಲ್ಯೂ ಃ 03 |
| ವಯಸ್ಸು | ಃ 26 ವರ್ಷ | ಪ್ರಮಾಣೀಕರಿಸಿದ ದಿಃ 04/05/2024 |
| ವೃತ್ತಿ | ಃ ಕೆ.ಇ.ಬಿ.ನೌಕರ | |
| ವಾಸ | ಃ ಬೆಟ್ಟಸಾತೇನಹಳ್ಳಿ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ. ನಾನು ಯಾವುದೇ ಅಪಘಾತದ ಸಂಬಂಧ ಪೋಲೀಸರಿಗೆ ಹೇಳಿಕೆ ನೀಡಿಲ್ಲ, ಸಾಕ್ಷಿ ತನ್ನ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕಃ 09.08.2022 ರಂದು ನಾನು ಮತ್ತು ಚಾಸಾ-2 ರವರು ಬಾಬ್ತು ಮೋಟಾರ್ ಬೈಕಿನಲ್ಲಿ ಕೆಲಸದ ನಿಮಿತ್ತ ಹೊಳೆನರಸೀಪುರಕ್ಕೆ ಬಂದು ನನ್ನ ಕೆಲಸ ಮುಗಿಸಿಕೊಂಡು ವಾಪಸ್ಸು ಊರಿಗೆ ಹೋಗುತ್ತಿದ್ದಾಗಾ ರಾತ್ರಿ 08.15 ಸಮಯದಲ್ಲಿ ನಮ್ಮೂರಿನ ವಿಶಾಲ್ ರಾಜ್ ಕೆಎ-13-ಇಇ-1996 ಮೋಟಾರ್ ಬೈಕಿನ ಹಿಂಬದಿಯಲ್ಲಿ ನಮ್ಮೂರಿನ ಚಾಸಾ-1 ರವರ ಮಗ ಮಹದೇವನನ್ನು ಕೂರಿಸಿಕೊಂಡು ಹೊಳೆನರಸೀಪುರದಿಂದ-ಬೆಟ್ಟದ ಸಾತೇನಹಳ್ಳಿ ಗ್ರಾಮಕ್ಕೆ ಹೋಗಲು ನಮ್ಮನ್ನು ಮಾತನಾಡಿಸಿಕೊಂಡು ನಮ್ಮಿಂದ ಸ್ವಲ್ಪ ಮುಂದೆ ಮಲ್ಲೇಶ್ವರ ಡೌನ್ ಕೊಂಡಯ್ಯನ ಕುಮಾರ್ ರವರ ಜಮೀನಿನ ನೇರದಲ್ಲಿ ಹೊಳೆನರಸೀಪುರ ಚನ್ನರಾಯಪಟ್ಟಣ ರಸ್ತೆಯಲ್ಲಿ ಹೋಗುತ್ತಿದ್ದಾಗಾ ಆರೋಪಿಯು ಮೋಟಾರ್ ಬೈಕ್ ಅನ್ನು ಅತಿವೇಗ ಹಾಗೂ ಅಜಾಗೂರುಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗಾ ರಸ್ತೆಯಲ್ಲಿ ಆಕಸ್ಮಿಕವಾಗಿ ಎತ್ತು ಅಡ್ಡ ಬಂದು ಬೈಕಿನ ಹ್ಯಾಂಡಲ್ ಗೆ ತಾಗಿ ಬೈಕ್ ನಿಯಂತ್ರಣ ಸಿಗದೇ ಇರುವುದರಿಂದ ಬೈಕ್ ಸಮೇತ ಇಬ್ಬರೂ ಕೆಳಗೆ ಬಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ತಕ್ಷಣ ನಾನು ಹಾಗೂ ಚಾಸಾ-2 ರವರು ಹೋಗಿ

ನೋಡಲಾಗಿ ಮಹದೇವನಿಗೆ ತಲೆಗೆ ಪೆಟ್ಟು ಬಿದ್ದು ರಕ್ತ ಬರುತ್ತಿದ್ದು ಹಾಗೂ ಆರೋಪಿಗಳಿಗೂ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಚಾಸಾ-2 ರವರು ಮಹದೇವನಿಗೆ ಸುಧಾರಿಸಿ ನನ್ನ ಬೈಕಿನಲ್ಲಿ ಮಹದೇವನಿಗೆ ಕೂರಿಸಿಕೊಂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುವಾಗ ಮಾರ್ಗ ಮಧ್ಯ ಮಹದೇವ ಮೃತಪಟ್ಟಿರುತ್ತಾರೆ ಆಸ್ಪತ್ರೆಯ ವೈದ್ಯರು ತಿಳಿಸಿದರು ಎಂದರೆ ಗೊತ್ತಿಲ್ಲ. ಆರೋಪಿಗೂ ಗಾಯವಾಗಿದ್ದರಿಂದ ಯಾವುದೇ ಬೈಕಿನಲ್ಲಿ ಕರೆತಂದು ಹೊಳೆನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾವು ಚಾಸಾ-1 ರವರಿಗೆ ತಿಳಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಆಕಸ್ಮಿಕವಾಗಿ ಅಡ್ಡ ಬಂದ ಎತ್ತು ನಮ್ಮೂರಿನ ಪ್ರೇಮ್ ಕುಮಾರ್ ರವರದು ಎಂದು ತಿಳಿಯಿತು ಎಂದರೆ ಸರಿಯಲ್ಲ. ಪ್ರೇಮಕುಮಾರ್ ರವರಿಗೆ ವಿಚಾರ ಮಾಡಲಾಗಿ ಎತ್ತಿಗೆ ಯಾವುದೇ ಗಾಯ ಆಗಿಲ್ಲ ಎಂದು ವಿಚಾರ ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 11.08.2022 ರಂದು ಪೋಲೀಸರಿಗೆ ಸದರಿ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸದರಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ ಹಾಗೂ ದಿನಾಂಕಃ 11.08.2022 ರಂದು ನಾನು ಪೋಲೀಸರ ಮುಂದೆ ಸದರಿ ಘಟನೆಯ ಬಗ್ಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ.ಪಿ. ವಕೀಲರಿಂದಃ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ